ಉಪಸಭಾಪತಿಯತ್ತ ನಿಯಮ ಪುಸ್ತಕ ತೂರಿದರು | ಕಾಗದ ಪತ್ರಗಳನ್ನು ಹರಿದು ಎಸೆದರು

# ಹಿರಿಯರ ಮನೆಯಲ್ಲಿ ಕೋಲಾಹಲ

## ಕೃಷಿ ಮಸೂದೆ ಅಂಗೀಕಾರ ವೇಳೆ ಕೋಲಾಹಲ | ಅಧಿಕಾರಿಗಳ ಟೇಬಲ್ ಏರಿದ ವಿಪಕ್ಷ ಸದಸ್ಯರು!

• ಪಿಟಿಐ ನವದೆಹಲಿ

ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ 2 ಮಸೂದೆಗಳ ಅಂಗೀಕಾರ ವೇಳೆ ಭಾನುವಾರ ರಾಜ್ಯಸಭೆಯಲ್ಲಿ ಭಾರಿ ಕೋಲಾಹಲವೇ ನಡೆದಿದೆ. 'ಹಿರಿಯರ ಮನೆ' ಎಂದು ಕರೆಸಿಕೊಳ್ಳುವ ಸಂಸತ್ತಿನ ಮೇಲ್ಮನೆಯಲ್ಲಿ ಪ್ರತಿಪಕ್ಷಗಳ ಸದಸ್ಯರು ಉಪಸಭಾಪತಿಗಳತ್ತ ನಿಯಮಾವಳಿ ಪುಸ್ತಕವನ್ನು ತೂರಿದ, ಕಾಗದಪತ್ರಗಳನ್ನು ಹರಿದು ಎಸೆದ ಹಾಗೂ ಅಧಿಕಾರಿಗಳ ಟೇಬಲ್ ಏರಿ ನಿಂತ ಅಪರೂಪದ ಘಟನೆ ನಡೆದಿದೆ. ಎಪಿಎಂಸಿ ಹೊರಗೂ ರೈತರು ತಮ್ಮ ಕೃಷಿ ಉತ್ಪನ್ನ ಮಾರಾಟ ಮಾಡಲು ಅವಕಾಶ ನೀಡುವ ಹಾಗೂ ಕಂಪನಿಗಳ ಜತೆ ರೈತರು ಗುತ್ತಿಗೆಕರಾರು ಮಾಡಿಕೊಳ್ಳುವ ಎರಡು ಮಸೂದೆಗಳು ಲೋಕಸಭೆಯಲ್ಲಿ ಅಂಗೀಕಾರವಾಗಿದ್ದವು. ಇವನ್ನು ಭಾನುವಾರ ರಾಜ್ಯಸಭೆಯಲ್ಲಿ ಮಂಡಿಸಲಾಯಿತು. ವಿಧೇಯಕ ಅಂಗೀಕಾರ ಉದ್ದೇಶದಿಂದ ಸದನದ ಕಾರ್ಯಕಲಾಪವನ್ನು ನಿಗದಿತ ಸಮಯಕ್ಕಿಂತ ವಿಸ್ತರಿಸಲಾಯಿತು. ಈ ಮಸೂದೆಗಳನ್ನು ವಿಸ್ತೃತವಾಗಿ ನಿಷ್ಕರ್ಷೆಗೆ ಒಳಪಡಿಸಲು ಆಯ್ಕೆ ಸಮಿತಿ ಸುಪರ್ದಿಗೆ ನೀಡಬೇಕು ಎಂದು ಪ್ರತಿಪಕ್ಷಗಳ 4 ಸದಸ್ಯರು ನಿಲುವಳಿ ಮಂಡಿಸಿದರು. ಇದಕ್ಕೆ ಧ್ವನಿಮತದಲ್ಲಿ ಸೋಲಾಯಿತು. ಪ್ರತಿಭಟನಾ ನಿರತ ಪ್ರತಿಪಕ್ಷಗಳು ಮತ ವಿಭಜನೆಗೆ ಪಟ್ಟು ಹಿಡಿದವು. ಸದಸ್ಯರು ಆಸನದಲ್ಲಿ ಕುಳಿತಿದ್ದರೆ ಮಾತ್ರ ಮತ ವಿಭಜನೆ ಮಾಡಬಹುದು ಎಂದು ಉಪಸಭಾಪತಿ ಹರಿವಂಶ ಅವರು ತಿಳಿಸಿದರು. ಈ ಸಂದರ್ಭದಲ್ಲಿ ತೃಣಮೂಲ ಕಾಂಗ್ರೆಸ್ಸಿನ ಡೆರೆಕ್ ಒಬ್ರಿಯಾನ್ ಅವರು ಉಪಸಭಾಪತಿಗಳ ಪೋಡಿಯಂನತ್ತ ನುಗ್ಗಿದರು. ನಿಯಮ ಪುಸ್ತಕವನ್ನು ಉಪಸಭಾಪತಿಯ ಮುಖದತ್ತ ಎಸೆದರು. ಈ ಸಂದರ್ಭದಲ್ಲಿ ಮಾರ್ಷಲ್‌ಗಳು ಅಡ್ಡಿಪಡಿಸಿದರು. ಉಪಸಭಾಪತಿಗಳ ಪೀಠದಿಂದ ಮೈಕ್ರೋಫೋನ್ ಕಿತ್ತೆಸೆವ ಪ್ರಯತ್ನವೂ ನಡೆಯಿತು. ಮಾರ್ಷಲ್‌ಗಳು ತಡೆದರು. ಈ ವೇಳೆ ತಾವು ಮಂಡಿಸಿದ್ದ ನಿಲುವಳಿಯನ್ನು ಸದಸ್ಯರು ಹರಿದು ಗಾಳಿಯಲ್ಲಿ ತೂರಿದರು. ಇಬ್ಬರು ಸದಸ್ಯರು ರಾಜ್ಯಸಭೆ ಅಧಿಕಾರಿಗಳ ಟೇಬಲ್ ಹತ್ತಿದರು. ರಾಜ್ಯಸಭೆಸದಸ್ಯರುಪ್ರತಿಭಟನೆಮುಂದುವರಿಸಿದರು. ಹೀಗಾಗಿ ಅಲ್ಲಿ ಆರಂಭವಾಗಬೇಕಾಗಿದ್ದ ಲೋಕಸಭೆ ಕಲಾಪ ಒಂದು ತಾಸು ವಿಳಂಬವಾಯಿತು.



ಉಪಸಭಾಪತಿಯತ್ತ ನಿಯಮಾವಳಿ ಪುಸ್ತಕ ತೂರಿದ ಟಿಎಂಸಿ ಸಂಸದ

## ಉಪಸಭಾಪತಿ ವಿರುದ್ಧ ಅವಿಶ್ವಾಸ

ನವದೆಹಲಿ: ಗದ್ದಲದ ಮಧ್ಯೆಯೇ ಎರಡು ಕೃಷಿ ಮಸೂದೆಗಳಿಗೆ ರಾಜ್ಯಸಭೆ ಅನುಮೋದನೆ ನೀಡಿದ್ದನ್ನು ಖಂಡಿಸಿ ರಾಜ್ಯಸಭಾ ಉಪಸಭಾಪತಿ ಹರಿವಂಶ ಸಿಂಗ್ ಅವರ ವಿರುದ್ಧ 12 ವಿಪಕ್ಷಗಳು ಭಾನುವಾರ ಅವಿಶ್ವಾಸ ನೋಟಿಸ್ ನೀಡಿವೆ. ಚರ್ಚೆ ಇಲ್ಲದೇ ಗದ್ದಲದಲ್ಲಿ ಈ ಮಸೂದೆಗಳನ್ನು ಅಂಗೀಕರಿಸಿದ್ದು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಆರೋಪಿಸಿ, ರಾಜ್ಯಸಭಾ ಉಪಸಭಾಪತಿ ಹರಿವಂಶ ವಿರುದ್ಧ ಕಾಂಗ್ರೆಸ್, ಟಿಎಂಸಿ, ಸಮಾಜವಾದಿ ಪಕ್ಷ, ಡಿಎಂಕೆ ಸೇರಿದಂತೆ 12 ಪಕ್ಷಗಳು ಅವಿಶ್ವಾಸ ನೋಟಿಸ್ ಅನ್ನು ಸಲ್ಲಿಸಿವೆ.

## ಪಂಜಾಬ್, ಹರ್ಯಾಣದಲ್ಲಿ ರೈತರಿಂದ ಭಾರಿ ಪ್ರತಿಭಟನೆ

ಚಂಡೀಗಢ: ಕೇಂದ್ರ ಸರ್ಕಾರದ ಎರಡು ಕೃಷಿ ಮಸೂದೆ ಪಂಜಾಬ್, ಹರ್ಯಾಣದಲ್ಲಿ ರೈತರು ಪ್ರತಿಭಟನೆಗೆ ಇಳಿದಿದ್ದಾರೆ. ಭಾನುವಾರ ರಸ್ತೆ ತಡೆ ನಡೆಸಿ, ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ನಡುವೆ ಹರ್ಯಾಣದಲ್ಲಿ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರದ ಭಾಗವಾಗಿರುವ ಜೆಜೆಪಿ ಪಕ್ಷದ ಇಬ್ಬರು ಶಾಸಕರೂ ಮಸೂದೆ ವಿರೋಧಿಸಿ ಪ್ರತಿಭಟನೆಗೆ ಬೆಂಬಲ ನೀಡಿದ್ದಾರೆ.

## ಗಲಾಟೆ ವೀರರ ವಿರುದ್ಧ ಕ್ರಮ?

ನವದೆಹಲಿ: ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ಎರಡು ಕೃಷಿ ಮಸೂದೆ ವಿರೋಧಿಸಿ ರಾಜ್ಯಸಭೆಯಲ್ಲಿ ಭಾನುವಾರ ಉಂಟಾದ ವಾಗ್ವಾದ, ಗದ್ದಲ ಘಟನೆ ಬಗ್ಗೆ ಸಭಾಪತಿ ವೆಂಕಯ್ಯ ನಾಯ್ಡು ಅವರು ಬೇಸರಗೊಂಡಿದ್ದು, ಮೇಲ್ಮನೆಯಲ್ಲಿ ಗದ್ದಲ ಉಂಟುಮಾಡಿದ ಸಂಸದರ ವಿರುದ್ಧ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಬಗ್ಗೆ ನಾಯ್ಡು ತಮ್ಮ ನಿವಾಸದಲ್ಲಿಯೇ ಉನ್ನತ ಮಟ್ಟದ ಸಭೆ ಕರೆದಿದ್ದು, ಉಪ ಸಭಾಪತಿ ಹರಿವಂಶ್, ಕೇಂದ್ರ ಸಚಿವ ಪಿಯೂಷ್ ಗೋಯಲ್ ಮತ್ತು ಸಂಸದೀಯ ಖಾತೆ ಸಚಿವ ಪ್ರಹ್ಲಾದ್ ಜೋಶಿ ಅವರು ಸಭೆಯಲ್ಲಿ ಪಾಲ್ಗೊಂಡಿದ್ದರು.

### ರೈತರಿಗೆ ಹೆಚ್ಚು ಲಾಭ

ಕೃಷಿ ಕ್ಷೇತ್ರದಲ್ಲಿ ಮಧ್ಯವರ್ತಿಗಳ ಹಾವಳಿಯನ್ನು ತಡೆಗಟ್ಟಲು ಈ ಮಸೂದೆಗಳು ನೆರವಾಗಲಿವೆ. ರೈತರು ತಮ್ಮ ಉತ್ಪನ್ನಗಳನ್ನು ಹೆಚ್ಚಿನ ಲಾಭಕ್ಕೆ ಮಾರಾಟ ಮಾಡಬಹುದಾಗಿದೆ. ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆ ಅಬಾಧಿತವಾಗಿ ಮುಂದುವರಿಯಲಿದೆ.

• ನರೇಂದ್ರ ಮೋದಿ
ಪ್ರಧಾನಿ

### ರೈತರಿಗೆ ಮರಣ ಶಾಸನ

ಇದು ರೈತ ವಿರೋಧಿ ಮಸೂದೆಯಾಗಿದೆ. ಇದು ರೈತರಿಗೆ ಡೆತ್ ವಾರಂಟ್ ಇದ್ದಂತೆ. ಎಪಿಎಂಸಿಗಳ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೆ. ಕನಿಷ್ಠ ಬೆಂಬಲ ಬೆಲೆ ಕೊಡುವುದನ್ನು ನಿಲ್ಲಿಸಲೆಂದೇ ಇದನ್ನು ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆ.

• ಪ್ರತಾಪ್ ಸಿಂಗ್ ಬಜ್ವಾ
ಕಾಂಗ್ರೆಸ್ ಸಂಸದ

### ಆದಾಯ ದ್ವಿಗುಣ ಆಗಲ್ಲ

ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಒಪ್ಪಿಸಬೇಕು. ಮೋದಿ ಅವರು 2022ಕ್ಕೆ ರೈತರ ಆದಾಯ ದ್ವಿಗುಣ ಮಾಡುತ್ತೇವೆ ಎಂದಿದ್ದರು. ಈಗಿನ ಸ್ಥಿತಿ ನೋಡಿದರೆ 2028ನೇ ಇಸ್ವಿವರೆಗೂ ಡಬಲ್ ಆಗುವುದಿಲ್ಲ.

• ಡೆರಿಕ್ ಒಬ್ರಿಯಾನ್
ಟಿಎಂಸಿ ಸಂಸದ

### ಇಂಥದ್ದನ್ನು ನೋಡಿಲ್ಲ

ಬಹುಶಃ ಆರು ದಶಕಗಳಲ್ಲಿ ಇಂಥ ರಾಜಕೀಯ ನಾನು ನೋಡಿಲ್ಲ. ರಾಜ್ಯಸಭೆಯಲ್ಲಿ ನಡೆದ ಘಟನೆ ಮನಸ್ಸಿಗೆ ನೋವು ತಂದಿದೆ. ಬರೀ ಕೂಗಾಟವೇ ಇತ್ತು. ಈ ವಿಧೇಯಕ ಜಾರಿಗೆ ಗಡಿಬಿಡಿ ಏಕೆ ಎಂದು ಸರ್ಕಾರ ಹೇಳಬೇಕು.

• ಎಚ್.ಡಿ. ದೇವೇಗೌಡ
ಮಾಜಿ ಪ್ರಧಾನಿ